ಬೇಡ್ತಿ ಜಲ ವಿದ್ಯುತ್ ಯೋಜನೆಯ ಕುರಿತು

1078 - ಶ್ರೀ ಉಮೇಶ್ ಭಟ್ (ಅಂಕೋಲಾ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದವರು ಬೇಡ್ತಿ ಜಲ ವಿದ್ಯುತ್ ಯೋಜನೆಯ ಅಧ್ಯಯನದ ಬಗ್ಗೆ ನೇಮಿಸಿದ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆಯೇ?*

ಆ) *ಹಾಗಿಲ್ಲದಿದ್ದಲ್ಲಿ ಎಂದು ವರದಿಯನ್ನು ಸಲ್ಲಿಸಲಾಗುವುದು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಉದ್ಭವಿಸುವುದಿಲ್ಲ.

ಆನೇಕಲ್ ತಾಲ್ಲೂಕಿನಲ್ಲಿ ಕ್ವಾರಿ ಮಾಡಲು ಪರವಾನಗಿ ನೀಡಿರುವುದು.

1073 - ಶ್ರೀ ಎಂ.ಪಿ. ಕೇಶವ ಮೂರ್ತಿ (ಆನೇಕಲ್) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಜಿಲ್ಲೆಯ ಆನೇಕಲ್ ತಾಲೂಕಿನಲ್ಲಿ ಕ್ವಾರಿ ಮಾಡಲು ಪರವಾನಗಿ ಕೊಡಲಾಗಿದೆಯೇ?*

ಆ) *ಹಾಗಿದ್ದಲ್ಲಿ ಅದರ ವಿಸ್ತೀರ್ಣವೆಷ್ಟು (ಯಾವ ಯಾವ ಸರ್ವೆ ನಂಬರ್‌ನಲ್ಲಿ ಪರವಾನಗಿ ಕೊಡಲಾಗಿದೆ ಮತ್ತು ಗುತ್ತಿಗೆದಾರರ ಹೆಸರುಗಳ ವಿವರ ಕೊಡುವುದು)?*

ಇ) *ಅತಿಕ್ರಮವಾಗಿ ಕ್ವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅಂತಹವರ ವಿರುದ್ಧ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು):

ಅ) ಕೊಡಲಾಗಿದೆ.

ಆ) 63.1 ಎಕರೆಗಳು (ಪಟ್ಟಿಯನ್ನು ಲಗತ್ತಿಸಿದೆ)

ಇ) ಬಂದಿದೆ. ಇಲ್ಲಿ ಕೆಲಸ ಮಾಡುತ್ತಿರುವವರಿಗೆ ಕಲ್ಲು ಗಣಿ ಗುತ್ತಿಗೆಗೆ ಅರ್ಜಿ ಸಲ್ಲಿಸಿ ಗಣಿ ಗುತ್ತಿಗೆ ಪಡೆದು ಕೆಲಸ ಮುಂದುವರಿಸಲು ಸೂಚಿಸಲಾಗಿದೆ, ಅದೇ ರೀತಿ ಈಗಾಗಲೇ 12 ಅರ್ಜಿಗಳು ಬಂದಿದ್ದು, ಅವುಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.